RNU AIR DHARWAD

JUNE 12, 2025

# AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ** **12.06.2025**

**ಪ್ರದೇಶ ಸಮಾಚಾರ** **12.00 ಗಂಟೆಗೆ**

<><><>

**1. ಇಂದು, ಅಂತಾರಾಷ್ಟ್ರೀಯ ಬಾಲ ಕಾರ್ಮಿಕ** ಪದ್ಧತಿ ವಿರೋಧಿ ದಿನ. 'ಪ್ರಗತಿ ಸ್ಪ ್ಟವಾಗಿದೆ, ಆದರೆ ಇನ್ನೂ ಹೆಚ್ಚು ಸಾಧಿಸಬೇಕಿದೆ; ನಮ್ಮ ಪ್ರಯತ್ನಗಳ ವೇಗ ವರ್ಧಿಸೋಣ' ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ.

<><><>

**ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ,** ಕಾರ್ಮಿಕ ಇಲಾಖೆ ಸಹಯೋಗದಲ್ಲಿ, ಇಂದು ಜನ ಜಾಗ್ರತಿ ಜಾಥಾ, ಬೈಕ್ ರ್‍ಯಾಲಿಗಳನ್ನು ಈ ಬೆಳಗ್ಗೆ, ರಾಜ್ಯಾದ್ಯಂತ ಆಯೋಜಿಸಿದ, ವರದಿಗಳು ಬಂದಿವೆ.

<><><>

**ರಾಜ್ಯದ ವಿವಿಧೆಡೆ, 14 ವರ್ಷದೊಳಗಿನ** ಬಾಲ ಹಾಗೂ 18 ವರ್ಷದೊಳಗಿನ ಕಿಶೋರ ಕಾರ್ಮಿಕರನ್ನು, ದುಡಿತದಲ್ಲಿ ತೊಡಗಿಸುವುದನ್ನು ನಿಷೇಧಿಸಿರುವ ಕುರಿತು, ಜಾಥಾ ವೇಳೆ, ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ.

<><><>

**ಬಾಲ ಹಾಗೂ ಕಿಶೋರ ಕಾರ್ಮಿಕ** ಪದ್ಧತಿ ನಿಷೇಧದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಬೀದರ್ ಜಿಲ್ಲೆ ಕಾರ್ಮಿಕ ಅಧಿಕಾರಿ, ಮಹೇಶ ಕೋಲಿ.

<><><>

**ಕಾರ್ಮಿಕ ಅಧಿಕಾರಿ ಮಹೇಶ ಧ್ವನಿ 35 ಸೆಕೆಂದುಗಳು**

<><><>

**2. ಹಾಸನ ಜಿಲ್ಲೆಯಲ್ಲಿ ಪರಿತ್ಯಕ್ತ, ಅನಾಥ ಅಥವಾ ಇತರೆ** ಮಕ್ಕಳು, ಈ ವರೆಗೆ, ಆಧಾರ್ ನೋಂದಣಿಯಾಗದೆ ಹೊರಗುಳಿದಿದ್ದರೆ, ಕೂಡಲೇ ಗುರುತಿಸಿ, ಆಧಾರ್ ನೋಂದಣಿ ಕೈಗೊಂಡು, 'ಸಾಥಿ ಅಭಿಯಾನ'ವನ್ನು ಯಶಸ್ವಿಗೊಳಿಸಲು, ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ಕೆ. ದಾಕ್ಷಾಯಿಣಿ ಸೂಚಿಸಿದ್ದಾರೆ. ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ 'ಸಾಥಿ ಅಭಿಯಾನ ಸಮಿತಿ' ಸದಸ್ಯರಿಗಾಗಿ, ಆಯೋಜಿಸಿದ್ದ, ಸಭೆಯಲ್ಲಿ ಅವರು ಮಾತನಾಡಿದರು.

<><><>

**3. ಮುಖ್ಯಮಂತ್ರಿ ಸಿದ್ದರಾಮಯ್ಯ,** ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರಿಗೆ ಪತ್ರ ಬರೆದಿದ್ದು, ಕರ್ನಾಟಕದ ತೋತಾಪುರಿ ಮಾವಿನಕಾಯಿ, ಚಿತ್ತೂರ ಜಿಲ್ಲೆ ಪ್ರವೇಶಿಸದಂತೆ ವಿಧಿಸಿರುವ ನಿರ್ಬಂಧವನ್ನು, ಮಾವು ಬೆಳೆಗಾರರ ಹಿತದೃಷ್ಟಿಯಿಂದ ತೆರವುಗೊಳಿಸುವಂತೆ, ಮನವಿ ಮಾಡಿದ್ದಾರೆ.

<><><>

**4. ಕಳೆದ 9 ನೇ ತಾರೀಖಿನಿಂದ, ಬರುವ ಜುಲೈ 9ರ ವರೆಗೆ,** 'ಬದಲಾಗುತ್ತಿರುವ ಭಾರತ; ನನ್ನ ಅನುಭವ' ಕುರಿತು, ಸಾಮಾಜಿಕ ಮಾಧ್ಯಮದಲ್ಲಿ, ಯುವಜನತೆ ತಮ್ಮ ಅನುಭವ ಹಂಚಿಕೊಳ್ಳುವ, ಡಿಜಿಟಲ್ ಕಂಟೆಂಟ್ ಕ್ರಿಯೇಷನ್ ಸ್ಪರ್ಧೆ ಆಯೋಜಿಸಲಾಗಿದೆ ಎಂದು, ವಿಧಾನ ಪರಿಷತ್ ಮಾಜಿ ಸದಸ್ಯ, ಅಮರನಾಥ ಪಾಟೀಲ, ಬೀದರ್ ನಲ್ಲಿ ತಿಳಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಕೇಂದ್ರದ ಬಿಜೆಪಿ ಸರ್ಕಾರ, 11 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆ, ಈ ತಿಂಗಳ 21 ರ ವರೆಗೆ, ದೇಶವ್ಯಾಪಿ ಅಭಿಯಾನ ಆಯೋಜಿಸಲಾಗಿದೆ. 'ವಿಕಸಿತ ಭಾರತದ, ಅಮೃತ ಕಾಲ ಮತ್ತು ಸೇವೆ, ಸುಶಾಸನ ಹಾಗೂ ಬಡವರ ಕಲ್ಯಾಣದ 11 ವರ್ಷಗಳ' ಮೇಲೆ, ಅಭಿಯಾನ ಆಧಾರಿತವಾಗಿದೆ ಎಂದರು.

<><><>

**5. ದಕ್ಷಿಣಕನ್ನಡ ಜಿಲ್ಲೆಯ ಜನತೆ,** ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಸಹೋದರತ್ವದ ಬಾಳ್ವೆಗೆ ಆದ್ಯತೆ ನೀಡಿ, ಶಾಂತಿಯೊಂದಿಗೆ, ಸಹಬಾಳ್ವೆ ನಡೆಸಲು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಕಳಕಳಿಯ ಮನವಿ ಮಾಡಿದ್ದಾರೆ.

<><><>

**6. ಹೊಸ ದಿಲ್ಲಿಯ,** ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಂಚಾಲಿತ, ರಾಷ್ಟ್ರೀಯ ಕೃಷಿ ಶಿಕ್ಷಣ ಮಾನ್ಯತೆ ಮಂಡಳಿ ತಂಡ, ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ, ಎ ಶ್ರೇಣಿ ಮಾನ್ಯತೆ ನೀಡಿ, ಪುರಸ್ಕರಿಸಿದೆ. ಉಪ ಕುಲಪತಿ ಪಿ.ಎಲ್. ಪಾಟೀಲ, ಈ ಮಾಹಿತಿ ನೀಡಿದ್ದು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಕಳೆದ ಐದು ವರ್ಷಗಳಲ್ಲಿ ಕೈಗೊಂಡ ಬೋಧನೆ, ಸಂಶೋಧನೆ, ವಿಸ್ತರಣೆ ಹಾಗೂ ಆಡಳಿತ ವಿಷಯಗಳಲ್ಲಿ ಸಾಧಿಸಿದ ಪ್ರಗತಿಯ ಆಧಾರದ ಮೇಲೆ, ಈ ಮಾನ್ಯತೆ ದೊರತಿದೆ. ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು, ಅಭಿನಂದನಾರ್ಹರು, ಎಂದರು.

<><><>

**7. ರಾಜ್ಯ ಉಚ್ಚ ನ್ಯಾಯಾಲಯದ** ನ್ಯಾಯಮೂರ್ತಿಯಾಗಿ, ಶ್ರೀಮತಿ ಪೆರುಗು ಶ್ರೀಸುಧಾ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ರಾಜಭವನದ ಸಭಾಂಗಣದಲ್ಲಿ, ಪ್ರಮಾಣ ವಚನ ಬೋಧಿಸಿದರು.

<><><>

**8. ಔಷಧೀಯ ಸಸ್ಯಗಳನ್ನು ಬೆಳೆಯುತ್ತಿರುವ,** ರಾಜ್ಯದ ವನವಾಸಿ ಸಮುದಾಯಗಳನ್ನು ಗುರುತಿಸಿ, ಪಟ್ಟಿ ಮಾಡುವಂತೆ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದ್ದಾರೆ. ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ಜರುಗಿದ ಸಭೆಯಲ್ಲಿ, ಔಷಧೀಯ ಸಸ್ಯಗಳಿಂದ ತಯಾರಾಗುವ, ಔಷಧಗಳಿಗೆ, ಸೂಕ್ತ ಕಚ್ಚಾ ವಸ್ತುಗಳ ಲಭ್ಯತೆ ಹಾಗೂ ಪ್ರಮಾಣೀಕರಣದ ಬಗ್ಗೆ, ಕ್ರಮ ಕೈಗೊಳ್ಳಲು, ಸಂಬಂಧಿತ ಅಧಿಕಾರಿಗಳಿಗೆ ತಿಳಿಸಿದರು.

<><><>

**9. ಪುರಾತತ್ವ ಸಂಗ್ರಹಾಲಯಗಳು** ಮತ್ತು ಪರಂಪರೆ ಇಲಾಖೆ, ಇಂದು ಸಂಜೆ 4 ಗಂಟೆಗೆ, ಬೆಂಗಳೂರಿನ ಕಸ್ತೂರ್ ಬಾ ರಸ್ತೆಯ, ನವೀಕೃತ ವೆಂಕಟಪ್ಪ ಚಿತ್ರಶಾಲೆಯ ಉದ್ಘಾಟನಾ ಸಮಾರಂಭ ಆಯೋಜಿಸಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ಪ್ರವಾಸೋದ್ಯಮ ಖಾತೆ ಸಚಿವ, ಎಚ್.ಕೆ.ಪಾಟೀಲ, ಪಾಲ್ಗೊಂಡು, ಚಿತ್ರಶಾಲೆಯನ್ನು ಉದ್ಘಾಟಿಸಲಿದ್ದಾರೆ.

<><><>

**10. ಬೆಂಗಳೂರಿನ, ರಾಜ್ಯ ಜಾನಪದ ಅಕಾದೆಮಿ,** 2024ನೇ ಸಾಲಿನಲ್ಲಿ ಪ್ರಕಟಗೊಂಡ, ಜನಪದ ಕೃತಿಗಳನ್ನು, ಪುಸ್ತಕ ಬಹಮಾನಕ್ಕಾಗಿ ಸಲ್ಲಿಸಲು, ಕೋರಿದೆ. ಈ ತಿಂಗಳ 30ರ ಒಳಗೆ, ಮೂರು ಪ್ರತಿಗಳ ಜೊತೆ, ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

<><><>

**11. ಪತ್ರಿಕೋದ್ಯಮ ಹಾಗೂ ಮಾಧ್ಯಮ** ಜಗತ್ತಿಗೆ ಸಂಬಂಧಿಸಿದ, 40ಕ್ಕೂ ಹೆಚ್ಚು ಪುಸ್ತಕಗಳು, ಬೆಂಗಳೂರಿನ, ಕರ್ನಾಟಕ ಮಾಧ್ಯಮ ಅಕಾದೆಮಿಯಲ್ಲಿ, ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯವಿದ್ದು, ಸದುಪಯೋಗ ಪಡೆದುಕೊಳ್ಳುವಂತೆ, ಅಕಾದೆಮಿ ಅಧ್ಯಕ್ಷೆ, ಆಯೇಶಾ ಖಾನಂ, ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>